| 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

ಎಸ್ ಸಿ 34/2023

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಅವಿನಾಶ್ | ಫ್ರಾಸಾ | 3 |
| ತಂದೆ ಹೆಸರು | ಃ | ಪುರುಷೋತ್ತಮಾಚಾರಿ | ಚಾಸಾ | 3 |
| ವಯಸ್ಸು | ಃ | 28 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ ಃ 07.02.2024 | |
| ವೃತ್ತಿ | ಃ | ಗಾರೆ ಕೆಲಸ | | |
| ವಾಸ ಸ್ಥಳ | ಃ | ಕೆ ಎನ್ ಪುರ , ಮೈಸೂರು | | |

ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ

1. ಚಾಸಾ 2 ಗೊತ್ತು. ಮೃತ ವೆಂಕಟೇಶ ಅಲಿಯಾಸ್ ಕರಿಯ ಗೊತ್ತಿಲ್ಲ. ಚಾಸಾ 1 ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತಿಲ್ಲ. ಸುಮಾರು ಎರಡು ವರ್ಷದ ಹಿಂದೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ 11 ಮಹಜರ್ ನಲ್ಲಿರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 11(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಯಾವ ಸ್ಥಳದಲ್ಲಿ ಯಾವ ಕಾರಣಕ್ಕೆ ಯಾರ ಸಮಕ್ಷಮದಲ್ಲಿ ಯಾವ ಸಮಯದಲ್ಲಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಅದರಡಿ ಪೊಲೀಸರು ಯಾವ ವಸ್ತುಗಳನ್ನು ಜಪ್ತು ಮಾಡಿಕೊಂಡು ಎನ್ನುವುದು ಗೊತ್ತಿಲ್ಲ. ಕ್ಯಾತಮಾರನಹಳ್ಳಿ ಅಶ್ವಥ ಕಟ್ಟೆ ರಸ್ತೆ ಹಾಗೂ ಟೆಂಟ್ ಸರ್ಕಲ್ ಬಳಿ ಪೊಲೀಸರು ಮಹಜರ್ ಮಾಡಿರುವ ವಿಚಾರ ಗೊತ್ತಿಲ್ಲ. ಪಂಚನಾಮೆ ಮಾಡುವ ಬಗ್ಗೆ ಪೊಲೀಸರು ನೀಡಿರುವ ನಿಪಿ 12 ನೋಟೀಸ್ ನಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ 12(ಬಿ) ಎಂದು ಗುರುತಿಸಲಾಯಿತು. ನಿಪಿ 12 ಕ್ಕೆ ಪೊಲೀಸರು ಯಾವ ಸ್ಥಳದಲ್ಲಿ ನನ್ನ ಸಹಿ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆ ಮೇರೆಗೆ ನಾನು ಹಾಜರಿದ್ದು ನಿಪಿ 3 ರಿಂದ 6 ಫೋಟೋ ತೆಗೆದುಕೊಳ್ಳಲು ಸಹಕರಿಸಿರುತ್ತೇನೆ. ಯಾವ ಕಾರಣಕ್ಕೆ ಸದರಿ ಫೋಟೋಗಳನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

(ಸರ್ಕಾರಿ ಅಬಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರವರಿಂದ ಃ

2. ದಿಃ 01.09.2022 ರಂದು ಕ್ಯಾತಮಾರನಹಳ್ಳಿ ಅಶ್ವಥ ಕಟ್ಟೆ ರಸ್ತೆ 13 ನೇ ಕ್ರಾಸ್ ನಲ್ಲಿರುವ ಮಂಚಪ್ಪ ಎಂಬುವವರ ಮನೆ ನಂ. 1456 ರ ಮುಂದೆ ಸಾರ್ವಜನಿಕ ಕಾಂಕ್ರೀಟ್ ರಸ್ತೆಯಲ್ಲಿ ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ 1 ರವರಿಗೆ ಮರಣಾಂತಿಕ ಹಲ್ಲೆ ಪ್ರಯತ್ನ ಹಾಗೂ ವೆಂಕಟೇಶ ಅಲಿಯಾಸ್ ಕರಿಯ ಇವರಿಗೆ ಮಾರಣಾಂತಿಕ ಹಲ್ಲೆ ನಡೆಸಿದ ಕೃತ್ಯ ಸ್ಥಳದಲ್ಲಿ ಪೊಲೀಸರು ನಿಪಿ 11 ರಂತೆ ಪಂಚನಾಮೆಯನ್ನು ಜರುಗಿಸಿ ಅಲ್ಲೇ ಸ್ಥಳದಲ್ಲಿ ಇದ್ದ ರಕ್ತ ಮಿಶ್ರಿತ ಮಣ್ಣನ್ನು ಕಾಟನ್ ನಿಂದ ತೆಗೆದು ಒಂದು ಡಬ್ಬದಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಅರಗಿನಿಂದ ಮೊಹರು ಮಾಡಿ ಪಂಚರ ಸಹಿಯನ್ನು ಪಡೆದಿರುವ ಚೀಟಿಯನ್ನು ಅದರ ಮೇಲೆ ಅಂಟಿಸಿ ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಂತೆಯೇ ರಕ್ತ ಮಿಶ್ರಿತ ಕಾಟನ್ ನ್ನು ಕೂಡ ನಮ್ಮ ಸಮಕ್ಷಮ ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರಿದು ನಮ್ಮ ಸಮಕ್ಷಮ ಒಂದು ಸ್ಯಾಂಪಲ್ ಕಾಟನ್ ನ್ನು ಸಹ ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ಬೆಳಿಗ್ಗೆ 6.30 ಗಂಟೆಯಿಂದ 7.30 ಗಂಟೆವರೆಗೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕೃತ್ಯ ನಡೆದ ಸ್ಥಳದಿಂದ ಪಶ್ಚಿಮಕ್ಕೆ ಸುಮಾರು 60 ಅಡಿ ಅಂತರದಲ್ಲಿ ಮಾರಣಾಂತಿಕ ಹಲ್ಲೆಗೆ ಒಳಪಟ್ಟು ವೆಂಕಟೇಶ ಅಲಿಯಾಸ್ ಕರಿಯ ಇವನು ಕುಸಿದು ಬಿದ್ದ ಸ್ಥಳದಲ್ಲಿ ಒಂದು ಪಂಚನಾಮೆಯನ್ನು ಜರುಗಿಸಿ ಅಲ್ಲೂ ಕೂಡ ಟಾರ್ ರಸ್ತೆಯ ಮೇಲೆ ಬಿದ್ದಿದ್ದ ರಕ್ತದ ಕಲೆಯನ್ನು ಒಂದು ಕಬ್ಬಿಣದ ಹಾರಿನಿಂದ ಟಾರಿನ ಸಮೇತ ಅಗೆದು ಸದರಿ ರಕ್ತದ ಕಲೆಗಳನ್ನು ಸಂಗ್ರಹಿಸಿ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಅರಗಿನಿಂದ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ ಜಪ್ತು

ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸ್ವಲ್ಪ ದೂರದಲ್ಲಿ ಟಾರ್ ಮಿಶ್ರಿತ ಸಾದಾ ಮಣ್ಣನ್ನು ಕಬ್ಬಿಣದ ಹಾರೆಯಿಂದ ಅಗೆದು ತೆಗೆದು ಅದನ್ನು ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಅರಗಿನಿಂದ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಸಮಯ ಬೆಳಿಗ್ಗೆ 7.45 ರಿಂದ 8.45 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಆ ಪಂಚನಾಮೆಗೆ ಆ ಸ್ಥಳದಲ್ಲೇ ಪೊಲೀಸರು ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ನಿಪಿ 11 ರಂತೆ ಮಹಜರ್ ಮಾಡಿ ಈ ಮೇಲೆ ಹೇಳಿರುವ ವಸ್ತುಗಳನ್ನು ಜಪ್ತು ಮಾಡಿಕೊಂಡಿದ್ದರು ಹಾಗೂ ಸ್ಥಳದಲ್ಲಿ ನಿಪಿ 3 ರಂದ 6 ರವರೆಗಿನ ಫೋಟೋಗಳನ್ನು ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ತೆಗೆದಿದ್ದರೂ ಹಾಗೂ ಮಹಜರ್ ಮಾಡುವ ಸಲುವಾಗಿ ನನಗೆ ಪೊಲೀಸರು ನೋಟೀಸ್ ನ್ನು ನೀಡಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವತ್ತು ಪಟ್ಟಿ ಸಂಖ್ಯೆ 125/2022 ರಲ್ಲಿ ನಮೂದಿಸಿರುವ ಐಟಂ ನಂ. 1 ರಿಂದ 6 ರವರೆಗಿನ ವಸ್ತುಗಳನ್ನು ಸಾಕ್ಷಿಗೆ ತೋರಿಸಲಾಗಿ ಅವನ್ನು ಗುರುತಿಸಿರುವುದಿಲ್ಲ. ಸ್ಥಳದಲ್ಲಿ ಪಂಚನಾಮೆ ಮಾಡುವಾಗ ಸದರಿ ಐಟಂ ನಂ. 1 ರಿಂದ 6 ವಸ್ತುಗಳನ್ನು ನನ್ನ ಸಮಕ್ಷಮದಲ್ಲಿ ಅಮಾನತ್ತು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯವಾಗಲಿ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿತರ  ಪರ ವಕೀಲರಿಂದ ಃ</u>**

**ಇಲ್ಲ ಎಂದು ಹೇಳುತ್ತಾರೆ.**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

**ಓ ಹೇ ಕೇ ಸ ಇ ಎ**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು